"ಅಕ್ಕಾರ ನೀವು ನನ್ ಜತೀ ಹುಟ್ಟಿದ ಹೆಣ್ಣಿದ್ದಂಗ... ನನ್ನ ಇಸ್ಯಾ ಎಲ್ಲ ನಿಮಗ, ನಿಮ್ಮ ಸಂಗ್ತಿ ಎಲ್ಲ ನನಗ ಗೊತ್ತಿದ್ದದ್ದೇ... ಬಡವನೋ, ಸಿರಿವಂತನೋ ಗಂಡನ ಕೂಟ ಸಿನಿಮಾ, ಜಾತ್ರಿ, ತೇರು ಅಂತ ಓಡಾಡ್ಬೇಕು ಅಂತ ಯಾವ ಹೆಣ್ಣಹೆಂಗಸುವಿಗೆ ಆಸೆ ಇರೋದಿಲ್ಲ ಹೇಳಿ... ಹುಟ್ಟಿ ಬೆಳದ ಊರು, ಜನಾ ಎಲ್ಲಾ ಬಿಟ್ಟು ಒಬ್ಬ ಹೆಣಮಗಳು ಮದಿವಿಯಾಗಿ ಗುರ್ತು ಪರಿಚಯ ಇಲ್ಲದ ತನ್ನ ಜತಿ ಬಂದು ಇರ್ತಾಳ, ತನಗ ಮಕ್ಕಳ ಮರಿ ಕೊಡ್ತಾಳ, ತನ್ನ ಅವ್ವಿ ಅಪ್ಪನ ಜ್ವಾಪಾನ ಮಾಡ್ಕಂಡು ಹೊಕ್ಕಾಳ, ಅಂತಾಕಿನ ತಾನು ಹೂವಿನಂಗ ಅಲ್ಲದಿದ್ರೂ ಹುಲ್ಲಿನ ಎಸಳಿನಂಗಾದರೂ ಕಿಮ್ಮತ್ತ ಕೊಟ್ಟ ನೋಡಿಕಂಡು ಹೋಗಬೇಕು ಅನ್ನೂದು ಗಂಡಸುಮಗಾ ಆದವಂಗ ಇರಾಕಬೇಕು... ಅದೆಲ್ಲ ಬಿಟ್ಟು ದುಡಮಿ ಮಾಡಿದ ಹಣಾನೆಲ್ಲ ಸೆರೆ, ಬೀಡಿ ಕುಡಿಯಾಕ, ಓಸಿ, ಎಲೆ ಆಡಾಕ ಹಾಕಿ ಬರಿಗೈಯಾಗ ಮನೀಗ ಬಂದು ಪ್ರಾಣಿ ತರಹ ಬಿದ್ಕಂಡ್ರೆ ಯಾವ ಹೆಂಡ್ತಿ ಮಾನ ಮರ್ಯಾದಿ ಕೊಡ್ತಾಳ ಹೇಳಿ... ಅವಳಿಗೇನ ಐಸಿರಿ ಕೊಡೂದ ಬ್ಯಾಡ ಅವನು... ಮಕ್ಳು, ಮರಿಗಾರ ಏನಾರ ತರೂದ ಬ್ಯಾಡೇನ... ಹೊಳ್ಳಿ ಮನ್ಯಾಗ ಏನಾರ ಕದ್ದು ಮಾರಾಟ ಮಾಡಿ ಕುಡದ ಬರಾಕ ನೋಡ್ತಾನ ಖಬರಗೇಡಿ... ಹಿಂತಾವನ ಕೂಡ ಬಾಳ್ವೆ ಮಾಡೋಕ ಹೇಸಿಕೆ ತರ್ತದ... ಮೈಮ್ಯಾಗ ಕೈ ಮಾಡೋಕೂ ಬಂದಿದ್ದ ಒಂದ್ಯಾಡ ಸಲ ನೋಡಿ... ಹಂಗ ಬಿಟ್ರೆ ಹೆಚ್ಚಾಕ್ತದ ಇವಂದು ಅಂತ ಒಲ್ಯಾಗಿನ ಉರಿಯೋ ಸೌದೆ ಎತ್ಕಂಡು ರಣಕಾಳಿ ಹಂಗ ಬಾರೋ ಮಗನ ಅಂತ ನಿಂತಬಿಟ್ಟಿದ್ದೆ... ಹೆದರಿ ಓಡಿಹೋದವ ಮೂರು ದಿನಾ ಮನೀಕಡೆ ತಲಿಹಾಕಿರಲಿಲ್ಲ... ಅದರ ಮ್ಯಾಲೆ ಈಗ ಕೈ ಕಾಲು ಎತ್ತಾಕ ಬರಾಂಗಿಲ್ಲ. ಸುಮ್ಮನ ಹಾಕಿದ್ದ ಉಂಡ್ಕೊಂಡು ಬಿದ್ದರ್ತಾನ... ಒಂದೊಂದ್ಸಲ ಪಾಪ ಅನ್ನಸ್ತೇತಿ. ತನ್ನ ಜೀಂವಾ ತಾನ ಹಾಳ ಮಾಡ್ಕೊತಾನಲ್ಲ ಅಂತ... ಅವನ ಮ್ಯಾಲೆ ಪ್ರೀತಿ ಇಲ್ದೇ ಹೋಗಿಲ್ಲ ನನಗ... ಅಂವಾ ಮನೀಗ ಬಂದಷ್ಟೊತ್ತಿಗ ಉಣ್ಣಾಕ ನೀಡ್ತೇನೆ. ಅವನ ಅಂಗಿ, ಧೋತ್ರಾ ಒಗಿಯಾಣ ಮಾಡ್ತೇನೆ. ಜಡ್ಡು ಜಾಪತ್ರಿ ಆದ್ರ ಮದ್ದು ತಂದು ಕೊಡ್ತೇನೆ, ಎಲ್ಲ ಮಾಡ್ತೇನೆ... ಆದ್ರೆ ಎಷ್ಟು ಬೇಕು ಅಷ್ಟ್ರಾಗ ಇದೀನಿ... ಹಿಂದೆಲ್ಲ ಕುಡ್ದು ಬಂದ್ರೂ ಆರೈಕೆ ಮಾಡ್ತಿದ್ದೆ, ಬುದ್ಧಿ ಹೇಳ್ತಿದ್ದೆ... ಈಗ ಅದೂ ಬಿಟ್ಟೇನಿ... ಯಾವಳನ್ನೋ ಇಟ್ಕಂಡಿದಾನೆ ಅಂತಾರೆ ಜನ... ನಾ ಏನ ನೋಡಿಲ್ಲ... ನೋಡಾಕ ಉಮ್ಮೇದಿನೂ ಇಲ್ಲ ಬಿಡ್ರಿ. ಸಾಯ್ಲಿ ಪಾಪ... ಇವನಂತವನನ್ನ ಇಟ್ಕ ಬೇಕಾದರೆ ಅವಳದು ಇನ್ನೆಂಥಾ ದುರವಸ್ಥೆ ಇರ್ಬೋದು... ಎಷ್ಟ ಕಷ್ಟದಾಗ ಇದ್ದಿರಬೇಕ ಆಕಿ... ಹೋಗತ್ತಾಗ ಅಂತ ಬಿಟ್ಟುಬಿಟ್ಟೇನಿ... ಹಿಡಿಯಾಕ ಬರದವರನ್ನ ಜಗ್ಗಿ ಜಗ್ಗಿ ಇತ್ಲಾಕಡೆ ಇವರ ಕೈ ನೋವು ಅತ್ಲಾ ಕಡೆ ಅವರ ಕುತ್ತಗಿ ನೋವು ಹಾಳಬಿದ್ದು ಸಾಯಲಿ ಅಂತ ಸುಮ್ಮನಾಗೇನಿ... ನಾ ದುಡೀಬೇಕು ನಾ ತಿನ್ನಬೇಕು ಅಷ್ಟೇ... ದೇವರು ನಂಗೆ ಮಕ್ಕಳಿಬ್ರನ್ನೂ ಬೇಸಾಗಿ ಕೊಟ್ಟಾನ... ಶಾಲ್ಯಾಗ ಛಂದಗ ಕಲೀತಿದ್ದಾರ... ಎಲ್ಲಾ ಸ್ಪರ್ಧೆಯಾಗೂ ಬಹುಮಾನ ತಕ್ಕೊಂಡ ಮನೀಗ ಬರ್ತಾರ. ಅವ್ರಿಗೆ ಈಗಿಂದಾನ ಒಳ್ಳೇ ನೀತಿ, ನಡಾಚಾರ ಕಲಸಾಕ ಹತ್ತೇನ್ರಿ... ಮುಂದ ಅವರ ಜೀವನ ಅವ್ರು ನಾಕ ಜನಾ ಮೆಚ್ಚುವಂಗ ನಡಸುವಂತಾದ್ರ ಸಾಕು... ಇದರ ಮೇಲ ಆ ಶಿವನ ಇಚ್ಛಾ... ವಯಸ್ಸಾದ ಮೇಲ ಅಪ್ಪ ಅವ್ವನ್ನ ಹೊರಗ ಹಾಕೂ ಮಕ್ಳೂ ಇದಾವ... ನಾಳಿ ಅಂತಾ ಕಾಲ ಬಂದ್ರೂ ತಯಾರಾಗಬೇಕ... ಅಲ್ಲೀವರಗ ನಮ್ಮ ಕರ್ತವ್ಯ ಅನ್ನೂದ ಮಾಡಾಕ ಬೇಕಲ್ಲ... ಹಾಂ, ಅದರ ಜೊತಿ ನಮ್ಮ ಜ್ವಾಕೀನೂ ನಾವ ಇಡಬೇಕ... ಈಗಿಂದಾನೇ ನನ್ನ ಹೆಸರಿನಾಗ ಚೂರಪಾರ ರೊಕ್ಕ ಕೂಡಿಡಲಾಕ ಹತ್ತೇನಿ... ನಾಳಿ ನಾ ಬಿದ್ದ ಕಾಲಕ್ಕಂತ ಚೂರು ಅನ್ನದ ಪಾಡು ಈಗ ಮಾಡಿಡಬೇಕಲ್ಲ..." ಬಸವಣ್ಣಿ ಹೇಳುತ್ತಿದ್ದರೆ ಅನಘಾ ಗೋಡೆಗೊರಗಿ ಸುಮ್ಮನೆ ಕೇಳುತ್ತ ಕುಳಿತಿದ್ದಳು.

ತನ್ನ ಕೆಲಸ ಮುಗಿಸಿ ಕವಳದ ಸಂಚಿಯ ಗಂಟು ಕಟ್ಟಿ ಬಸವಣ್ಣಿ, "ಅಕ್ಕಾ ನಾ ಹೋಗಿ ಬರ್ತೆನ್ರಿ. ನಾಳೆ ಬರುವಾಗ ಅಡಸೋಗೆ ಮತ್ತ ಭೂತನ ಸೊಪ್ಪು ಅರೆದು ತರ್ತೇನ್ರಿ... ಕೈ ಗಾಯಕ್ಕೆ, ನೋವಿಗೆ ಕಟ್ಟೂಣಂತ... ಇವತ್ತು ಕೆಲ್ಸ ಜಾಸ್ತಿ ಮಾಡಾಕ ಹೋಗಬ್ಯಾಡ್ರಿ" ಎನ್ನುತ್ತ ಮೆಟ್ಟಿಲಿಳಿದು ಅಂಗಳದ ಮೂಲೆಗೆ ಬಿಟ್ಟ ಚಪ್ಪಲಿ ಮೆಟ್ಟಿ ಹೊರಟು ದಣಪೆ ದಾಟಿ ಮರೆಯಾಗುವವರೆಗೂ ಅನಘಾ ಅವಳನ್ನೇ ನೋಡುತ್ತಲುಳಿದಳು.

ಬಸವಣ್ಣಿಗೆ ನನ್ನ ಮುಂಗೈ ಗಾಯ ಮತ್ತು ನೋವಿನ ಗುಟ್ಟು ಗೊತ್ತಾಗಿರಬಹುದೇ... ಹಾಗಾಗಿಯೇ ಇಷ್ಟೊಂದೆಲ್ಲ ತನ್ನ ಜೀವನದ ಪ್ರವರಗಳನ್ನು ಎಂದೂ ಹೇಳದವಳು ಇವತ್ತು ಹೇಳಿಕೊಂಡದ್ದಿರಬಹುದೇ... ಅನಘಾಳಿಗೆ ಅನ್ನಿಸತೊಡಗಿತು... ಹೌದು ಬಸವಣ್ಣಿಗೆ